| | | |
|---|---|---|
| ಅಭ್ಯಾಸ ಪತ್ರಿಕೆಯ ಸಂಖ್ಯೆ : WT_7S_5.4_DSERT | | ಕರ್ನಾಟಕ ಮಂಡಳಿ |
| ತರಗತಿ : 7 | ವಿಷಯ : ವಿಜ್ಞಾನ | ದಿನಾಂಕ : 18/07/2021 |
| ಅಧ್ಯಾಯದ ಕ್ರಮ ಸಂಖ್ಯೆ ಹಾಗು ಹೆಸರು : 5- ಆಮ್ಲಗಳು, ಪ್ರತ್ಯಾಮ್ಲಗಳು ಮತ್ತು ಲವಣಗಳು | | |
| ಉಪ ಅಧ್ಯಾಯ : ಇರುವೆ ಕಚ್ಚುವಿಕೆ, ಮಣ್ಣಿನ ಸಂಸ್ಕರಣೆ ಮತ್ತು ಕಾರ್ಖಾನೆ ತ್ಯಾಜ್ಯಗಳು | | |

| | |
|---|---|
| | **ವಿಭಾಗ - 1** |
| ಪ್ರಶ್ನೆ 1 | ಈ ಹೇಳಿಕೆಗಳು ಸರಿಯಾಗಿದ್ದರೆ T ಎಂದು ಅಥವಾ ತಪ್ಪಾಗಿದ್ದರೆ F ಎಂದು ಗುರುತಿಸಿ. |
| (ಕ) | ತಟಸ್ಥೀಕರಣದ ಮೂಲಕ ಮಣ್ಣಿನ ಸಂಸ್ಕರಣೆ ಮಾಡುವುದರಿಂದ ಗಿಡಗಳ ಬೆಳವಣಿಗೆ ಕುಂಠಿತವಾಗುತ್ತದೆ. |
| ಉತ್ತರ | F |
| | |
| (ಖ) | ಇರುವೆ ಕಚ್ಚುವಿಕೆಗೆ ಸುಟ್ಟ ಸುಣ್ಣ ಒಂದೇ ಪರಿಹಾರ. |
| ಉತ್ತರ | F |
| | |
| ಪ್ರಶ್ನೆ 2 | ಸರಿಯಾದ ಉತ್ತರ ಆಯ್ಕೆ ಮಾಡಿ.<br>ಇರುವೆ ಕಚ್ಚಿದಾಗ ಉಂಟಾಗುವ ಆಮ್ಲೀಯ ದ್ರವವನ್ನು ಹೀಗೆಂದು ಕರೆಯಲಾಗುತ್ತದೆ, _______<br>ಅ) ಹೈಡ್ರೋಕ್ಲೋರಿಕ್ ಆಮ್ಲ ಆ) ಸಲ್ಫ್ಯೂರಿಕ್ ಆಮ್ಲ<br>ಇ)ಫಾರ್ಮಿಕ್ ಆಮ್ಲ ಈ)ಯಾವುದು ಅಲ್ಲ |
| ಉತ್ತರ | ಇ)ಫಾರ್ಮಿಕ್ ಆಮ್ಲ |
| | |
| ಪ್ರಶ್ನೆ 3 | ಬಿಟ್ಟ ಸ್ಥಳ ತುಂಬಿರಿ.<br>ಮಣ್ಣು ಪ್ರತ್ಯಾಮ್ಲವಾದಾಗ, ತಟಸ್ಥೀಕರಣಕ್ಕಾಗಿ _________ಸೇರಿಸಲಾಗುತ್ತದೆ. |

| | |
|---|---|
| ಉತ್ತರ | ಮಣ್ಣು ಪ್ರತ್ಯಾಮ್ಲವಾದಾಗ, ತಟಸ್ಥೀಕರಣಕ್ಕಾಗಿ ಸಾವಯವ ವಸ್ತುಗಳನ್ನು ಸೇರಿಸಲಾಗುತ್ತದೆ. |
| | |
| ವಿಭಾಗ - 2 | |
| ಪ್ರಶ್ನೆ 4 | ತಟಸ್ಥೀಕರಣಕ್ಕಾಗಿ ಈ ಕೆಳಗಿನವುಗಳಲ್ಲಿ ಬಳಸಲಾಗುವ ಪ್ರತ್ಯಾಮ್ಲಗಳ ಹೆಸರನ್ನು ಬರೆಯಿರಿ.<br>ಕ)ಅಜೀರ್ಣ =__________<br>ಖ)ಇರುವೆ ಕಚ್ಚುವಿಕೆ =__________<br>ಗ) ಮಣ್ಣಿನ ಸಂಸ್ಕರಣೆ =__________ |
| ಉತ್ತರ | ಕ)ಅಜೀರ್ಣ = ಮೆಗ್ನೀಸಿಯಂ ಹೈಡ್ರಾಕ್ಸೈಡ್<br>ಖ)ಇರುವೆ ಕಚ್ಚುವಿಕೆ = ಅಡುಗೆ ಸೋಡ<br>ಗ) ಮಣ್ಣಿನ ಸಂಸ್ಕರಣೆ = ಸುಟ್ಟ ಸುಣ್ಣ |
| | |
| ಪ್ರಶ್ನೆ 5 | ಕಾರ್ಖಾನೆಗಳ ಬಳಿ ಇರುವ ಜಲ ಜೀವಿಗಳನ್ನು ನೀವು ಹೇಗೆ ಕಾಪಾಡುತ್ತಿರಿ? |
| ಉತ್ತರ | ಅನೇಕ ಕಾರ್ಖಾನೆಗಳ ತ್ಯಾಜ್ಯಗಳು ಆಮ್ಲಗಳನ್ನು ಒಳಗೊಂಡಿರುತ್ತವೆ. ಇವುಗಳನ್ನು ನೀರಿನ ಆಕರಗಳಿಗೆ ಹರಿಯಲು ಬಿಟ್ಟಾಗ, ಈ ಆಮ್ಲಗಳು ಮೀನು ಮತ್ತು ಇತರ ಜೀವಿಗಳನ್ನು ಕೊಲ್ಲುತ್ತವೆ. ಆದ್ದರಿಂದ ಪ್ರತ್ಯಾಮ್ಲೀಯ ಪದಾರ್ಥಗಳನ್ನು ಸೇರಿಸಿ, ಕಾರ್ಖಾನೆ ತ್ಯಾಜ್ಯಗಳನ್ನು ತಟಸ್ಥಗೊಳಿಸಲಾಗುತ್ತದೆ. ಹೀಗೆ ಕಾರ್ಖಾನೆಗಳ ಬಳಿ ಇರುವ ಜಲ ಜೀವಿಗಳನ್ನು ಕಾಪಾಡುಬಹುದು. |
| | |
| ವಿಭಾಗ - 3 | |
| ಪ್ರಶ್ನೆ 6 | ಇರುವೆ ಕಚ್ಚಿದಾಗ ಕ್ಯಾಲಮೈನ್ ದ್ರಾವಣವನ್ನು ಉಜ್ಜಲು ಕಾರಣವೇನೆಂದು ವಿವರಿಸಿ. |
| ಉತ್ತರ | ಇರುವೆ ಕಚ್ಚುವಾಗ ಅದು ಆಮ್ಲೀಯ ದ್ರವವನ್ನು (formic acid) ಚರ್ಮದ ಒಳಗೆ ಸ್ರವಿಸುತ್ತದೆ. ಒದ್ದೆ ಮಾಡಿದ ಅಡುಗೆ ಸೋಡ ಅಥವಾ ಸತುವಿನ ಕಾರ್ಬೋನೇಟ್ ಉಳ್ಳ ಕ್ಯಾಲಮೈನ್ ದ್ರಾವಣವನ್ನು ಉಜ್ಜುವುದರಿಂದ ಈ ಆಮ್ಲದ ಪರಿಣಾಮವನ್ನು ತಟಸ್ಥಗೊಳಿಸಬಹುದು. ಆದ್ದರಿಂದ ಇರುವೆ ಕಚ್ಚಿದಾಗ ಕ್ಯಾಲಮೈನ್ ದ್ರಾವಣವನ್ನು ಉಜ್ಜುತ್ತಾರೆ. |

| | |
|---|---|
| ಪ್ರಶ್ನೆ 7 | ಕಾರ್ಖಾನೆ ತ್ಯಾಜ್ಯಗಳನ್ನು ವಿಲೇವಾರಿ ಮಾಡುವ ಮುನ್ನ ಅವುಗಳನ್ನು ತಟಸ್ಥಗೊಳಿಸಲು ಕಾರಣವೇನೆಂದು ವಿವರಿಸಿ. |
| ಉತ್ತರ | ಅನೇಕ ಕಾರ್ಖಾನೆಗಳ ತ್ಯಾಜ್ಯಗಳು ಆಮ್ಲಗಳನ್ನು ಒಳಗೊಂಡಿರುತ್ತವೆ. ಇವುಗಳನ್ನು ನೀರಿನ ಆಕರಗಳಿಗೆ ಹರಿಯಲು ಬಿಟ್ಟಾಗ, ಈ ಆಮ್ಲಗಳು ಮೀನು ಮತ್ತು ಇತರ ಜೀವಿಗಳನ್ನು ಕೊಲ್ಲುತ್ತವೆ. ಆದ್ದರಿಂದ ಪ್ರತ್ಯಾಮ್ಲೀಯ ಪದಾರ್ಥಗಳನ್ನು ಸೇರಿಸಿ, ಕಾರ್ಖಾನೆ ತ್ಯಾಜ್ಯಗಳನ್ನು ತಟಸ್ಥಗೊಳಿಸಲಾಗುತ್ತದೆ. ಹೀಗೆ ಕಾರ್ಖಾನೆಗಳ ಬಳಿ ಇರುವ ಜಲ ಜೀವಿಗಳನ್ನು ಕಾಪಾಡುಬಹುದು. |
| | |
| | |
| | |
| | |
| | |
| | |
| | |
| | |
| | |
| | |
| | |
| | |